## ಕಲ್ಲುಗಳು ಸಾರ್ ಕಲ್ಲುಗಳು!

ರಾಜು ಲಾರಿ ಡ್ರೈವರ್. ಬೇರೆ ಬೇರೆ ಊರುಗಳಿಂದ ಲಾರಿಯಲ್ಲಿ ಕಲ್ಲು, ಮಣ್ಣು, ಇಟ್ಟಿಗೆ ಮತ್ತಿತರರ ವಸ್ತುಗಳನ್ನು ಸಾಗಿಸುತ್ತಿದ್ದ. ಆಸ್ಪತ್ರೆಯೊಂದರ ಕಟ್ಟಡ ರಿಪೇರಿಗೆ ಒಂದು ಲೋಡ್ ಕಲ್ಲನ್ನು ತರಲಿಕ್ಕೆ ಹೇಳಿದ್ದರು.

ರಾಜು ಆಸ್ಪತ್ರೆಯ ಎದುರು ಲಾರಿ ನಿಲ್ಲಿಸಿ ಒಳಹೋದ. ಕೌಂಟರಲ್ಲಿ ಕುಳಿತಿದ್ದ ಯುವತಿ 'ಏನು' ಎಂದು ಕೇಳಿದಾಗ 'ಕಲ್ಲಿವೆ' ಎಂದು ಹೇಳಿದ. 'ರೂಂ ನಂಬರ್ 8ಕ್ಕೆ' ಹೋಗಿ ಎಂದಳು ಯುವತಿ. ರಾಜು ಸೀದಾ ರೂಂ ನಂಬರ್ 8ಕ್ಕೆ ಹೋದ. ಅಲ್ಲಿ ಕುಳಿತಿದ್ದ ವೈದ್ಯರು 'ಎಕ್ಸಾಮಿನೇಷನ್ ಟೇಬಲ್' ಮೇಲೆ ಮಲಗಲು ರಾಜುಗೆ ಹೇಳಿದರು. 'ನೋವು ಹೊಟ್ಟೆಯ ಬಲಭಾಗದಲ್ಲಿಯಾ? ಎಡಭಾಗದಲ್ಲಿಯಾ?' ಎಂದು ವೈದ್ಯರು ಕೇಳಿದಾಗ, 'ಒಂದು ಲೋಡ್ ಕಲ್ಲು



ಹೊರಗಿದೆ. ಎಲ್ಲಿ ಇಳಿಸುವುದು?' ಎಂದು ಶರ್ಟ್ ಸರಿಪಡಿಸುತ್ತಾ ರಾಜು ಎದ್ದ. ಆತನ ಮಾತು ಕೇಳಿ ಆಸ್ಪತ್ರೆಯವರು ತಬ್ಬಿಬ್ಬು.

**ವೀಣಾ ಡಿ. ಸತೀಶ್**

---



ಕಲೆ: ಗಣೇಶ ಆಚಾರ್ಯ

## ಥೇಟ್ ಅಪ್ಪನ ಥರ ಆಗ್ತೀನಿ!

ಹೊಸದಾಗಿ ಮದುವೆಯಾಗಿದ್ದ ಅಶೋಕನನ್ನು ತಾಯಿ ಭಾಗ್ಯಮ್ಮ ಕರೆದು 'ನೋಡು ಅಶೋಕ ನೀನು ಹೆಂಡತಿ ಹೇಳಿದ ಹಾಗೆ ಕುಣಿದರೆ ಮುಂದೆ ಏನಾಗುತ್ತದೆ ಎಂದು ಗೊತ್ತಾ ನಿನಗೆ?' ಎಂದು ಕೇಳಿದಳು.

ಅದಕ್ಕೆ ಅವನು 'ಅದು ನನಗೆ ಬಹಳ ಚೆನ್ನಾಗಿ ಗೊತ್ತು' ಎಂದ.

'ಅಲ್ಲ ಕಣೋ, ಈ ಬಗ್ಗೆ ನಿನಗೆ ಏನು ಗೊತ್ತು?' ಎಂದು ತಾಯಿ ಮರು ಪ್ರಶ್ನಿಸಿದಾಗ, ಮಗ, 'ಅದೇ ಅಮ್ಮ, ನಾನು ಥೇಟ್ ಅಪ್ಪನ ಥರ ಆಗ್ತೀನಿ ಅಷ್ಟೇ' ಎಂದು ನೇರವಾಗಿಯೇ ಉತ್ತರ ಕೊಟ್ಟ. ಮಗನ ಮಾತು ಕೇಳಿ ತಾಯಿ ತಬ್ಬಿಬ್ಬಾದಳು.

**ಶಂಕರೇಗೌಡ ತುಂಬಕೆರೆ**